(ಬ) ಭಟ್ಕಳದ ಸರ್ಕಾರಿ ಆಸ್ಪತ್ರೆಯ ವಿಸ್ತರಣಾ ಕಾರ್ಯದಲ್ಲಿ ಕಳಪೆ ದರ್ಜೆ ಕಾಮಗಾರಿ ನಡೆದಿರುವುದು.

ಶ್ರೀ ಶಿವಾನಂದ ನಾಯ್ಕ(ಭಟ್ಕಳ): ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಆರೋಗ್ಯ ಸಚಿವರ ಗಮನ ಸೆಳೆಯುವುದೇನೆಂದರೆ, ಭಟ್ಕಳದ ಸರ್ಕಾರಿ ಆಸ್ಪತ್ರೆ ನಲವತ್ತು ಹಾಸಿಗೆಗಳ ಕಟ್ಟಡವಾಗಿದ್ದು, ಐವತ್ತು ಹಾಸಿಗೆಗಳನ್ನಾಗಿ ಮಾಡುವ ಸಂಬಂಧವಾಗಿ ಕಟ್ಟಡವನ್ನು ವಿಸ್ತರಿಸುವುದಕ್ಕೆ ಈಗಾಗಲೇ 40.35 ಲಕ್ಷ ರೂಪಾಯಿಗಳು ಮಂಜೂರಾಗಿದ್ದು, ಮತ್ತು ಅದೇ ರೀತಿ ಹಳೆಯ ಕಟ್ಟಡವನ್ನು ನವೀಕರಣಗೊಳಿಸಲು 14.35 ಲಕ್ಷ ರೂಪಾಯಿಗಳು ಮಂಜೂರಾಗಿರುತ್ತದೆ. ಆದರೆ, ಕಾಮಗಾರಿ ಪೂರ್ಣವಾಗಿ ಕಳಪೆಯಾಗಿರುವುದರಿಂದ ಈಗಾಗಲೇ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆದಿದ್ದೇನೆ. ಕಳಪೆ ಕಾಮಗಾರಿಯಾಗಿರುವುದು ಸರ್ಕಾರದ ಅಧಿಕಾರಿಗಳಿಗೆ ಗೊತ್ತಿದ್ದರೂ ಸಹ ಶೇಕಡಾ 80 ರಷ್ಟು ಪೇಮೆಂಟ್ ಮಾಡಿದ್ದಾರೆ. ದುರಸ್ತಿಗೊಳಿಸಲಾದ ಹಳೆಯ ಕಟ್ಟಡ ಪೂರ್ತಿ ಸೋರುತ್ತಿದೆ ಅಲ್ಲದೆ, ಹಳೆಯ ಹೆಂಚಿಗೆ ಪೈಂಟಿಂಗ್ ಮಾಡಿದ್ದಾರೆ. ಅನಂತರ, ಹೊಸದಾಗಿ ಕಟ್ಟಿರುವ ಕಟ್ಟಡದ ಸ್ಲ್ಯಾಬ್ ಸಹ ಸೋರುತ್ತಿದೆ. ಅದರ ಮೇಲೆ ಹೆಂಚು ಹೊದಿಸಿದ್ದರೂ ಸಹ ಇವೊತ್ತು ಅಲ್ಲಿಂದ ನೀರು ಸೋರುತ್ತಿದೆ.

ಅಧ್ಯಕ್ಷರು: ಮಾನ್ಯ ಸಚಿವರಿಗೆ ನೀವು ಅಷ್ಟು ಹೇಳಿದರೆ ಸಾಕು, ಎಲ್ಲವೂ ಗೊತ್ತಾಗುತ್ತದೆ. ಅವರು ಆ ಕುರಿತು ಸುದೀರ್ಘವಾಗಿ ಹೇಳುತ್ತಾರೆ. ತಾವು ಕರ್ನಾಟಕ ಹೆಲ್ತ್ ಸಿಸ್ಟಂನಲ್ಲಿ ಈ ಕೆಲಸವನ್ನು ಪ್ರಾರಂಭಿಸಿದ್ದೀರಾ? ಶಿವಾನಂದ ನಾಯ್ಕರೆ, ತಾವು ಕುಳಿತುಕೊಳ್ಳಿ, ತಮಗೆ ಖುಷಿಯಾಗುವ ರೀತಿಯಲ್ಲಿ ಸಚಿವರು ಉತ್ತರ ಹೇಳುತ್ತಾರೆ.

ಶ್ರೀ ಶಿವಾನಂದ ನಾಯ್ಕ: ಕಳಪೆ ಕಾಮಗಾರಿಯಾಗಿರುವ ಕುರಿತು ನಾನು ಸಚಿವರಿಗೆ, ಸಂಬಂಧಪಟ್ಟ ಅಧಿಕಾರಿಗಳೆಲ್ಲರಿಗೂ ಪತ್ರ ಬರೆದಿದ್ದೇನೆ. ಈ ರೀತಿ ಕಳಪೆ ಕಾಮಗಾರಿಯಾಗಿದೆಯೆಂದು ಗೊತ್ತಿದ್ದೂ ಸಹ ಶೇಕಡಾ 80 ರಷ್ಟು ಹಣವನ್ನು ಏಕೆ ಪೇಮೆಂಟ್ ಮಾಡಿದರು? ಇದರಲ್ಲಿ ಅಧಿಕಾರಿಗಳಿಗೆ ಎಷ್ಟು ಪರ್ಸೆಂಟೇಜ್ ಸಿಗುತ್ತದೆ? ಕಳಪೆ ಕಾಮಗಾರಿಯಾಗಲು ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಮತ್ತು ತಕ್ಷಣವೇ ಕಟ್ಟಡವನ್ನು ಸರಿಪಡಿಸುವಂತಾಗಬೇಕು. ಯಾವ್ಯಾವ ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೋ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ನಾನು ಅಧ್ಯಕ್ಷರ ಮೂಲಕ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ವಿಶ್ವ ಬ್ಯಾಂಕಿನ ನೆರವಿನ ಯೋಜನೆಯಡಿ ಮೇಲ್ದರ್ಜೆಗೇರಿಸಿರುವ ಆಸ್ಪತ್ರೆ ಇದಾಗಿದ್ದು ಇಲ್ಲಿ ಕಾಮಗಾರಿ ನಡೆಯುತ್ತಿದೆ. ಕಾಮಗಾರಿ ನಡೆಯುತ್ತಿರುವಂಥ ಸಂದರ್ಭದಲ್ಲಿ ಮಾನ್ಯ ಶಾಸಕರು ಕೂಡ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಎರಡು

ಎಡ್ಜ್‌ಗಳನ್ನು ಸೇರಿಸುವಾಗ ಮಳೆ ಬಂದಂಥ ಸಮಯದಲ್ಲಿ ನೀರು ನಿಂತು ಸಹಜವಾಗಿ ಹೊರಗೆ ಹೋಗುವುದಕ್ಕೆ ಸ್ಥಳಾವಕಾಶ ಇರಲೇಬೇಕಾಗುತ್ತದೆ. ಅನಂತರ ಅದನ್ನು ಸಂಪೂರ್ಣವಾಗಿ ಮುಚ್ಚಬೇಕಾಗುತ್ತದೆ. ಆದರೆ, ಅದನ್ನು ಕಳಪೆ ಕಾಮಗಾರಿ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಭಾರತ ದೇಶದ ಅತ್ಯುನ್ನತ ಕ್ವಾಲಿಟಿ ಮೇನ್‌ಟೇನ್ ಸಂಸ್ಥೆಯಾದ ಟಾರ್ ಸ್ಟೀಲ್ ಫೌಂಡೇಶನ್ ಆಫ್ ಇಂಡಿಯಾದ ಡಾ: ವಿಶ್ವನಾಥರವರು ಇದಕ್ಕೆ ಅಧ್ಯಕ್ಷರಾಗಿದ್ದು ಅವರು ಈ ತರಹದ ಕಾಮಗಾರಿಗಳೆಲ್ಲವನ್ನೂ ಸೂಪರ್‌ವೈಸ್ ಮಾಡುತ್ತಿದ್ದಾರೆ. ಎಲ್ಲಿಯಾದರೂ ಒಂದು ಕಡೆ ಕಳಪೆ ಕಾಮಗಾರಿ ಇದ್ದರೆ ತಕ್ಷಣವೇ ಆ ಕಾಮಗಾರಿಯನ್ನು ನಿಲ್ಲಿಸಿಬಿಡುತ್ತಾರೆ. ಪ್ರತಿಯೊಂದು ಹಂತದಲ್ಲೂ ಕೂಡ ಕಾಮಗಾರಿ ಮಾಡಬೇಕೆಂದರೆ 1, 2, 4 ರೇಷಿಯೋದಲ್ಲಿ ಅಂದರೆ ಒಂದು ಬಾಣಲಿ ಸಿಮೆಂಟ್, ಎರಡು ಬಾಣಲಿ ಮರಳು ಮತ್ತು ನಾಲ್ಕು ಬಾಣಲಿ ಜೆಲ್ಲಿ ಇರಬೇಕಾಗುತ್ತದೆ. ಈ ಸ್ಟ್ಯಾಂಡರ್ಡ್ ಅನ್ನು ಇಂಡಿಯಾ ದೇಶದಲ್ಲಾಗುವ ಯಾವುದೇ ಒಂದು ಕನ್‌ಸ್ಟ್ರಕ್ಷನ್‌ಗೆ ಅಳವಡಿಸಿಕೊಂಡು ಕಟ್ಟಡವನ್ನು ನಿರ್ಮಿಸಲಾಗುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ನೀರು ಸೋರುತ್ತಿದೆಯೆಂದರೆ, ಎರಡು ಎಡ್ಜ್‌ಗಳನ್ನು ಸೇರಿಸುವ ಸಮಯದಲ್ಲಿ ಮಾನ್ಯ ಶಾಸಕರು ಕೂಡ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಅಲ್ಲಿ ಯಾರೋ ಕಮೀಷನ್ ತೆಗೆದುಕೊಂಡು ಈ ರೀತಿ ಮಾಡುವುದಕ್ಕೆ ವಿಶ್ವ ಬ್ಯಾಂಕಿನ ನೆರವಿನ ಯೋಜನೆಯಡಿ ಇದುವರೆವಿಗೂ ಯಾರಿಗೂ ಅವಕಾಶ ಕೊಟ್ಟಿಲ್ಲ. ಅಂದರೆ, ಅದು ಕಳಪೆ ಕಾಮಗಾರಿಯಲ್ಲ. ಅಲ್ಲಿ ನೀರು ಸೋರುತ್ತಿರುವ ಸಂದರ್ಭದಲ್ಲಿ ನೀರು ಹರಿದು ಹೊರಗಡೆ ಹೋಗಲೇಬೇಕಲ್ಲ. ಆ ಕಾರಣಕ್ಕಾಗಿ ನಿಂತಿರುವ ನೀರು ಹರಿದು ಹೋಗುವುದಕ್ಕೆ ಮತ್ತು ಹೆಂಚುಗಳನ್ನು ಸರಿ ಪಡಿಸುವುದಕ್ಕೆ ನಾನು ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ಅದು ಕಳಪೆ ಕಾಮಗಾರಿಯಾಗುವುದಕ್ಕೆ ಸಾಧ್ಯವಿಲ್ಲವೆಂದು ಮತ್ತೊಮ್ಮೆ ಹೇಳಬಯಸುತ್ತೇನೆ.

ಶ್ರೀ ಶಿವಾನಂದ ನಾಯ್ಕ: ಮಾನ್ಯ ಸಚಿವರು ಅದನ್ನು ಸಮರ್ಥಿಸಿಕೊಳ್ಳುವುದು ಬೇಡ. ನಾನು ಈಗಾಗಲೇ ಆ ಕಾಮಗಾರಿಯನ್ನು ನೋಡಿ ಬಂದಿರುವುದಲ್ಲದೆ ಆ ಕುರಿತು ತೆಗೆದಿರುವ ಎಲ್ಲಾ ಫೋಟೋಗಳನ್ನು ಸಹ ತಂದುಕೊಡುತ್ತೇನೆ. ಸ್ಲ್ಯಾಬ್ ಸೋರುತ್ತಿದೆ, ಆ ಸೋರಿಕೆಯನ್ನು ನಿಲ್ಲಿಸುವುದಕ್ಕೆ ಸ್ಲ್ಯಾಬ್ ಮೇಲೆ ಹೆಂಚನ್ನು ಹೊದಿಸಿದ್ದಾರೆ. ಆದರೂ ಕೂಡ ನೀರು ಇಲ್ಲಿಯ ತನಕ ಸೋರುತ್ತಿದೆ ಮತ್ತು ಹಳೆಯ ಕಟ್ಟಡವನ್ನು ಏನು ದುರಸ್ತಿಗೊಳಿಸಿದ್ದೀರಿ, ಹಳೆಯ ಹೆಂಚಿಗೆ ಅವರು ಪೈಂಟಿಂಗ್ ಮಾಡಿದ್ದಾರೆ.

ಅಧ್ಯಕ್ಷರು: ವಿಶ್ವ ಬ್ಯಾಂಕಿನ ನೆರವಿನ ಯೋಜನೆಯಡಿ ಕರ್ನಾಟಕ ಹೆಲ್ತ್ ಸಿಸ್ಟಂನಲ್ಲಿ ಡಾ: ಸುಬ್ರಹ್ಮಣ್ಯಂ ಅವರು ನೇತೃತ್ವದಲ್ಲಿ ಇಡೀ ರಾಜ್ಯಾದ್ಯಂತ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಶಾಸಕರಾದ ಡಾ: ಹೆಚ್.ಸಿ. ಬಾಲಕೃಷ್ಣರವರ ಕ್ಷೇತ್ರವಾದ ಮಾಗಡಿಯಲ್ಲಿ ಅಂತಹ ಕಟ್ಟಡದ ಉದ್ಘಾಟನೆಗೆ ನಾನು ಹೋಗಿದ್ದೇನೆ.

ಎಲ್ಲಾಕಡೆಗಳಲ್ಲೂ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ, ಕಳಪೆ ಕಾಮಗಾರಿಯಾಗಲು ಅವಕಾಶವೇ ಇಲ್ಲ. ಒಂದು ವೇಳೆ ಕಾಮಗಾರಿಯಲ್ಲಿ ಹೆಚ್ಚು -ಕಡಿಮೆಯಾಗಿದ್ದರೆ ಅವರು ತಮ್ಮ ಅಧಿಕಾರಿಗಳಿಗೆ ಹೇಳುತ್ತಾರೆ, ತಕ್ಷಣ ಬಂದು ನೋಡುತ್ತಾರೆ.

ಶ್ರೀ ಶಿವಾನಂದ ನಾಯ್ಕ: ಇದರ ಬಗ್ಗೆ ತಕ್ಷಣವೇ ಎನ್‌ಕ್ವೆಯರಿ ಮಾಡಲಿ.

ಅಧ್ಯಕ್ಷರು: ಅದರ ಬಗ್ಗೆ ಎನ್‌ಕ್ವೆಯರಿ ಮಾಡಿಸಿ.

ಡಾ: ಹೆಚ್.ಸಿ. ಮಹದೇವಪ್ಪ: ನಾನು ಈಗಾಗಲೇ ಹೇಳಿರುವಂತೆ ಅದು ಕಳಪೆ ಕಾಮಗಾರಿಯಾಗುವುದಕ್ಕೆ ಸಾಧ್ಯವಿಲ್ಲ.

ಓ) ವಿಟ್ಲ ಕ್ಷೇತ್ರದ ಬಂಟ್ವಾಳ ತಾಲ್ಲೂಕಿನ ಬಿ.ಸಿ. ರಸ್ತೆಯಲ್ಲಿ ಸಂಚಾರಿ ಪೋಲೀಸ್ ಘಟಕ ಸ್ಥಾಪನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ): ಮಾನ್ಯ ಅಧ್ಯಕ್ಷರೆ, ಬಿ.ಸಿ. ರಸ್ತೆ ನನ್ನ ಕ್ಷೇತ್ರದ ಮತ್ತು ಬಂಟ್ವಾಳ ತಾಲ್ಲೂಕಿನ ಒಂದು ಪ್ರಮುಖ ಪೇಟೆಯಾಗಿದ್ದು, ಅಲ್ಲಿ ನಮ್ಮ ತಾಲ್ಲೂಕಿನ ಸರ್ಕಾರದ ಎಲ್ಲಾ ಪ್ರಮುಖ ಇಲಾಖೆಗಳು ಕಾರ್ಯ ನಿರ್ವಹಿಸುತ್ತಿವೆಯಲ್ಲದೆ ಶಾಲಾ-ಕಾಲೇಜುಗಳೂ ಸಹ ಇದ್ದು ರಾಷ್ಟ್ರೀಯ ಹೆದ್ದಾರಿ ಪೇಟೆಯ ಮಧ್ಯ ಭಾಗದಿಂದ ಹಾಯ್ದು ಹೋಗುತ್ತದೆ. ನಮ್ಮ ಜಿಲ್ಲೆಯ ಎಲ್ಲಾ ಪ್ರಮುಖ ಕೇಂದ್ರಗಳಿಗೂ ಸಂಪರ್ಕವಿರುವ ಒಂದು ಊರು ಅದಾಗಿದ್ದು, ಅಂತಹ ಊರಿನಲ್ಲಿ ಈಗ ಜನಸಂಖ್ಯೆಯ ಹೆ ಚ್ಚಳ ಮತ್ತು ವಾಹನ ಸಂಚಾರ ಜಾಸ್ತಿಯಾಗಿರುವ ಕಾರಣ ಆ ರಸ್ತೆಯಲ್ಲಿ ಜನರಿಗೆ ಸಂಚರಿಸುವುದಕ್ಕೆ ಅಸಾಧ್ಯವಾಗುತ್ತಿದೆ ಮತ್ತು ರಸ್ತೆಯನ್ನು ದಾಟುವುದಕ್ಕಾಗದ ಪರಿಸ್ಥಿತಿಯೂ ನಿರ್ಮಾಣವಾಗಿದೆ. ಆದುದರಿಂದ, ಅಲ್ಲೊಂದು ಸಂಚಾರಿ ಪೋಲೀಸ್ ಘಟಕವನ್ನು ಸ್ಥಾಪಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಇದರ ಬಗ್ಗೆ ಪರಿಶೀಲಿಸುತ್ತೇವೆಂಬ ಉತ್ತರ ನನಗೆ ಬೇಡ, ಅದನ್ನು ಕಾರ್ಯಗತಗೊಳಿಸುತ್ತೇವೆಂಬ ಉತ್ತರ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸದಸ್ಯರಾದ ರುಕ್ಮಯ್ಯ ಪೂಜಾರಿಯವರು ಹೇಳಿರುವುದು ನಿಜ, ಇಲ್ಲವೆಂದು ಹೇಳುವುದಿಲ್ಲ. ಅಲ್ಲಿನ ನೇತ್ರಾವತಿ ಸೇತುವೆಯನ್ನು ದಾಟಿ ಬಿ.ಸಿ. ರಸ್ತೆಗೆ ತಲುಪಲು ಬಹಳ ಕಷ್ಟವಾಗಿದೆ. ಅಲ್ಲದೆ, ಅಲ್ಲಿ ಎನ್.ಹೆಚ್.48 ಕೂಡ ಹಾಯ್ದು ಹೋಗುವುದರಿಂದ ಅವರು ಅಲ್ಲೊಂದು ಸಂಚಾರಿ ಪೊಲೀಸ್ ಘಟಕ ಕೇಳಿರುವುದು ಸಹಜವಾಗಿರುವುರಿಂದ ಇದನ್ನು ನಾನು ಗೃಹ ಸಚಿವರ ಗಮನಕ್ಕೆ ತರುತ್ತೇನೆ. ಅವರ